# ಅರಿವಿನ ಬೆಳಗು.




**ವಿಶ್ವನಾಥ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಪೀಠ
ಭಾರತೀಯ ಭಾಷೆಗಳ ಕೇಂದ್ರ
ಜೆಎನ್‌ಯು, ನವದೆಹಲಿ.

**Article Link: https://aksharasurya.com/2023/11/vishwanatha-4/**

"ಶಬ್ದದೊಳಗಣ ನಿಶ್ಯಬ್ದ"– ಅಲ್ಲಮರು. ಮಹಾತ್ಮರ ಚರಿತಾಮೃತ ಇದು ಶ್ರೀ ಶ್ರೀ ಪ್ರಭುಚೆನ್ನಬಸವಸ್ವಾಮೀಜಿ ಅವರ ಹೆಬ್ಬೊತ್ತಿಗೆ. ಕನ್ನಡಸಾರಸ್ವತಲೋಕದಲ್ಲಿ ಅನೇಕ ಮಹಾಮಹಿಮರು ಜನಿಸಿ ಸಮಸಮಾಜ ನಿರ್ಮಾಣಮಾಡಿದ್ದಾರೆ. ಮಾನವತೆ, ಪ್ರೀತಿ, ಕರುಣೆ, ಅನ್ನದಾಸೋಹ, ಅಕ್ಷರ ದಾಸೋಹ, ಆರೋಗ್ಯದಾಸೋಹ ಮಾಡುವುದರ ಮೂಲಕ ಅನೇಕ ಉಪಕಾರ ಕಾಯಕಮಾಡಿ, ಭಾರತೀಯ, ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯಲ್ಲಿ ದಾಖಲಾಗಿದ್ದಾರೆ. ಬಹುಜನರ ಬದುಕಿಗೆ ಜಂಗಮದ ಬೆಳಕು ತೋ–ರಿದ್ದಾರೆ. ಜಗತ್ತಿನ ಶ್ರೇಷ್ಠಚೇತನಗಳ ಜೀವನಸಾಧನೆ, ರಾಷ್ಟ್ರ, ರಾಜ್ಯಗಳ ಅಭಿವೃದ್ಧಿಗೆ ಅವರು ಸವೆಸಿದ ಹಾದಿಯನ್ನು ಶರಣರಾದ ಶ್ರೀಶ್ರೀಶ್ರೀ ಪ್ರಭುಚೆನ್ನಬಸವಸ್ವಾಮೀಜಿ ಅವರು ಮಹಾತ್ಮರ ಚರಿತಾಮೃತವನ್ನು ಕನ್ನಡಿಗರಿಗೆ, ಕರ್ನಾಟಕದ ಮಹಾಜನತೆಗೆ ಉಣಬಡಿಸಿದ್ದಾರೆ. ಇದೊಂದು ಆಳ, ಅಧ್ಯಯನದ ಅನುಭಾವಿಕ ಕಥನ. ಇಲ್ಲಿ ಬರುವ ಮಹಾಚೇತನಗಳ ಹುಟ್ಟು ಸಾಮಾನ್ಯ. ಆದರೆ ಅವರ ಸಾಧನೆಯ ಶಿಖರ ಮುಗಿಲಿನ ಎತ್ತರ. ಸಾಮಾನ್ಯರಾಗಿ ಜನಿಸಿ, ಸಮಾಜಮುಖಿ, ಜನಮುಖಿ ಕಾಯಕ ಮಾಡುತ್ತಾ, ಬೆಳಗಲ್ಲಿ ಬೆಳಗುವ ಮಹಾಚೇತನರ ಚರಿತ್ರೆ ಈ ಮಹಾಕೃತಿಯಲ್ಲಿ ಅನಾವರಣಗೊಂಡಿದೆ. ರಾಜಪರಂಪರೆ, ಗುರುಪರಂಪರೆ, ಶರಣಪರಂಪರೆಗಳ ಹೂರಣ ಈ ಕೃತಿಯ ಮತ್ತೊಂದು ವಿಶೇಷವಾದ ಹೆಗ್ಗಳಿಕೆ.ಕಾಶ್ಮೀರದಿಂದ–ಕನ್ಯಾಕುಮಾರಿ, ಗುಜರಾತನಿಂದ–ಪಶ್ಚಿಮಬಂಗಾಳದವರೆಗೆ ನಮ್ಮ ತಾತ್ವಿಕ, ಕಾಯಕ ಮಾನವತೆ, ಸಮಾಜಸೇವೆ ಪರಂಪರೆ ಹಬ್ಬಿದೆ. ಗೌರವದ ಮಹರ್ಷಿಗಳಿಂದಹಿಡಿದು ಆಧುನಿಕ ತಪೋನಿರತ ಕಾಯಕ ಜೀವಿಗಳು ಕರ್ನಾಟಕ, ಭಾರತದ ದೇಶದ ವಿವಿಧ ರಾಜ್ಯಗಳಲ್ಲಿ ಸೇವೆಗೈದು ಶಿಕ್ಷಣಹಸಿವಿನ ಕೊರತೆನೀಗುವಿಕೆ, ಉದ್ಯೋಗದ ಸ್ವಾವಲಂಬನೆ, ದಾರ್ಶನಿಕತೆ ಮೆರೆದಿದ್ದಾರೆ. ಮಾನವತೆ ಬಿತ್ತಿದ ಭಕ್ತಿಬಂಡಾರಿ ಬಸವಣ್ಣನವರಿಂದ ಆಧುನಿಕ ಮಹಾಪುರುಷ ಶ್ರೀಶರೀಪಅಜ್ಜಾ, ತಾಯಿ ಸ್ವರೂಪದ ಜಯದೇವಿತಾಯಿಲಿಗಾಡೆಯವರು ರಚಿಸಿದ ತ್ರಿಪದಿ ಪ್ರಕಾರದ ಮಹಾಕಾವ್ಯ

ಸಿದ್ಧರಾಮಪುರಾಣದವರೆಗಿನ ಅಭಿವ್ಯಕ್ತಿ ಈ ಮಹಾಕೃತಿಯಲ್ಲಿ ಅನಾವರಣಗೊಂಡಿವೆ. ಆರಂಭಿಕ ಶತಮಾನದ ಸಿದ್ಧಪುರುಷರ ಸಿದ್ಧಿ ಸಾಧನೆ ಕಥಾನಕ ಒಂದೆಡೆಯಾದರೆ ಸರ್ವಜ್ಞ, ಕಬೀರರು, ವೇಮನ, ತಿರುವುಳ್ಳರ್ ಅವರು ಸಮಾಜಮುಖಿ ಸಾಹಿತ್ಯಕ, ಸಮಾನತೆಯ ಆಶಯಗಳು ಈ ಮಹಾಕೃತಿಯಲಿ ಮೇಳವಿಸಿವೆ. ಈ ಮಹಾನ್ ಕೃತಿ ಚರಿತೆಯ ಅಮೃತ 12ನೇ ಶತಮಾನದ ಕಾಯಕ ಮಹಾಪುರುಷರು, ಕಾಯಕ ಅನುಷ್ಠಾನ, ಸಂಪತ್ತಿನ ವಿನಿಯೋಗ, ಜಂಗಮದಲಿದುಡಿಮೆ ಮೂಲಕ ದೈವವನು ಕಂಡ ಶ್ರೀಬಸವಣ್ಣನವರು, ಅಲ್ಲಮರು, ಸ್ತ್ರೀತ್ವವನ್ನು ಪ್ರತಿನಿಧಿಸುವ ಸಾಧ್ವಿ ಅಕ್ಕಮಹಾದೇವಿ, ಕಾಶ್ಮೀರದ ಲಲ್ಲೇಶ್ವರಿ, ಮೀರಾಬಾಯಿ, ಸಿದ್ಧರಾಮ, ದೇವರದಾಸಿಮಯ್ಯ, ಮಾದಾರಚೆನ್ನಯ್ಯ ಅವರ ಚಾರಿತ್ರಿಕಚರಿತೆ, ಇಂದಿನ ನೆಲದಲ್ಲಿ ಅನುಸಂಧಾನಗೊಳ್ಳುವ ಮೂಲಕ ಒಂದು ವಿನೂತನ ಅಭಿವ್ಯಕ್ತಿಯ ಕೃತಿಯಾಗಿದೆ. ಈ ಅಮೃತಧಾರಾ ಮಹಾಕೃತಿ ಮಹಾತ್ಮರಚರಿತಾಮೃತದಲ್ಲಿ ಮಹರ್ಷಿ ಅರವಿಂದರ ದರ್ಶನವಿದೆ. ಸ್ವಾಮಿ ವಿವೇಕಾನಂದರ ತಾತ್ವಿಕ, ಆದರ್ಶದ ದೇಶ ಪ್ರೇಮದ ಸುಧಾಂಸುವಿದೆ. ರಾಮಕೃಷ್ಣಪರಮಹಂಸರ ಬೋಧೆಯಿದೆ. ಮಾತಾ ಶಾರದದೇವಿ ಅವರ ವಾಣಿಯ ಸಿಂಚನದ ವರ್ಷಧಾರೆಗಳು ಸುರಿದಿವೆ. ಹಳೆಬೇರಿಗೆ ಹೊಸಚಿಗುರು, ಹೊಸಚಿಗುರಿಗೆ ಹಳೆಬೇರಿನ ಸತ್ವ ಹೀರಿಕೊಂಡು ಜಗದ ಬೆಳಕಾದ ಮಹಾನ್ ಚೇತನಗಳಾದ ಗೌತಮರು, ಮಹಾವೀರರು, ಪೈಗಂಬರರು, ಏಸುಕ್ರಿಸ್ತರು, ಗುರುನಾನಕರು, ಅವರು ಬೋಧಿಸಿದ ತತ್ವಗಳು ಹೂವಾಗಿ ಅರಳಿ, ಮೊಗ್ಗಾಗಿ ಕಂಪುಬೀರಿವೆ. ಡಾ. ಅನಿಬೆಸೆಂಟ್. ಶ್ರೀರಾನಡೆ, ಮದನಮೋಹನಮಾಳವೀಮ, ರಾಜರಾಮಮೋಹನರಾಯರ ಸಮರ್ಪಣ ಭಾವದ ಸಮಾಜಸೇವೆ, ಮಾನವತಾಸೇವಾ ಆಶಯಗಳು ಈ ಕೃತಿಯಲ್ಲಿ ಮುಪ್ಪುರಿಗೊಂಡಿವೆ. ಭೌಗೋಳಿಕ ನೆಲದಲ್ಲಿ ಎಲ್ಲಾ ಬಗೆಯ ತರುಗಳು ಹಣ್ಣು, ಹೂ, ನೆರಳು ಕೊಡುವಂತೆ, ಸಮುದ್ರ ಒಳಗೆ ಮುತ್ತು ರತ್ನ, ಪಯಿರು, ಪಚ್ಚೆ, ಜಲಚರಗಳು ಆರಾಮವಾಗಿ ಜೀವಿಸುವಂತೆ, ಈ ಮಹಾನ ಕೃತಿ ಸರ್ವವಿಧದ, ವಿಭೂತಿ ಪುರುಷರು, ಮಹಾಮಹಿಮರ ತಪಸ್ಸಿನ ಸಾಧನೆ, ಅದರಿಂದ ಬಂದ ಫಲಿತಗಳನ್ನು ಅಚ್ಚುಕಟ್ಟಾಗಿ ನಿರೂಪಿಸಿ, ಈ ಬೃಹತ್ ಹೊತ್ತಿಗೆ ನವನೀತವಾಗಿ ಹೊರಹೊಮ್ಮಿದೆ. ಭಾರತ ದೇಶ ಬಹುಧರ್ಮದ, ಬಹುಭಾಷೆಯ, ಬಹುವೇಷಭೂಷಣ, ಅನೇಕ ತಪಸ್ವಿ ಸಾಧಕರ ನೆಲೆ, ಭೂಮಿ, ಪ್ರದೇಶ, ಸೀಮೆ, ಇಲ್ಲಿ ಅಖಂಡ ಭಾರತೀಯತೆಯ ಪರಂಪರೆ ಮಹಾಪುರುಷರು ಜನ್ಮವೆತ್ತಿ ಬಂದು, ಸಮಾಜ, ದೇಶದ ಜನತೆ ಪರವಾಗಿ ಜ್ಞಾನದಾಸೋಹ, ಅನ್ನದಾಸೋಹ, ಆರೋಗ್ಯದಾಸೋಹ, ಪ್ರೀತಿವಾಂಛೆಗಳ ದರುಶನದ ಕಾಣ್ಕೆಯಾಗಿ ನೀಡಿದ ಸೇವಭಾವದ ನೆಲವಾಗಿದೆ. ಪ್ರತಿಯೊಬ್ಬ ಸಾಧಕರ ಹುಟ್ಟು ಸಾಮಾನ್ಯ.

ಆದರೆ ಅವರು ಸವೆಸಿದ ಹಾದಿ ದುರ್ಗಮ, ಕಠಿಣ. ಅವರವರು ಏರಿದ ಎತ್ತರ ಗೌರಿಶಂಕರ, ಹಿಮಾಲಯ, ಧರೆ, ಮುಗಿಲಿನಷ್ಟು ವಿಸ್ತಾರ, ಮಾನವತೆ, ಸಹಬಾಳ್ವೆಯ ಸಹಕಾರ. ಹಣತೆ ಒಂದು ಮನೆ ಬೆಳಗುತ್ತೆ, ಬೀದಿ ದೀಪ ಒಂದು ಬೀದಿಕಾಣಿಸುತ್ತೆ. ಈ ಮಹಾಮಹಿಮರು ಇಡೀಜಗತ್ತಿನ ಸೂರ್ಯನಬೆಳಕು. ನೊಂದವರಿಗೆ ತಂಪೆರೆದ ಒಂದೇ ಪೂರ್ಣಿಮೆಯಚಂದ್ರ. ಸಿದ್ಧಿಸಾಧನೆಯ ಮಹಾಸಾಗರ. ಕಲ್ಯಾಣದ ಮಹಾಬೆಳಗಿನಲ್ಲಿ ಮೂಡಿಬಂದ ಮುಕ್ತಾತ್ಮರಾದ ಅಂಕಲಗಿ ಶ್ರೀಅಡಿವೆಪ್ಪನವರಿಂದ, ಹೊಸಹಳ್ಳಿಯ ಶ್ರೀಬೂದೀಶ್ವರರ ವರೆಗೆ ಮಹಾತ್ಮರ ಚರಿತ್ರೆಯಯಾನ ಸುಗಮವಾಗಿ ನಡೆದಿದೆ. ಜಂಗಮನ ಆಗಮನ ವಸಂತದ ತಂಗಾಳಿಯಂತೆ ಎಂದು ಅಲ್ಲಮರು ಹೇಳುತ್ತಾರೆ.

ಈ ಮಹಾಕೃತಿಯ ವನದಲಿ ಆರಳಿನಿಂತಿರುವ ಸುವಾಸನೆಯ ಹೂಗಳೆಲ್ಲ ಕಠಿಣ ಪರಿಶ್ರಮದ ಮೂಲಕ ಸಮಾಜದ ಸೂರ್ಯರಾಗಿ ಪಡಿಮೂಡಿದ್ದಾರೆ. ಸಮಾಜದಲ್ಲಿ ದಟ್ಟವಾಗಿ ಹುದುಗಿದ್ದ ಕಂದಚಾರ ದೂರ ಮಾಡಿದ್ದಾರೆ. ಜನರನ್ನು ಮುಖ್ಯ ಜ್ಞಾನ, ಅಕ್ಷರ, ವಿದ್ಯಾಭ್ಯಾಸ ವಾಹಿನಿಯಲ್ಲಿ ತಂದಿದ್ದಾರೆ. ಸತ್ವಯುತ ಬೋಧ ಮಾಡಿದ್ದಾರೆ. ಅವರ ತಪಸ್ಸಿನ ಸಿದ್ಧಿ ಉತ್ತರದ ಶಿಖರದ ಎತ್ತರ, ದಕ್ಷಿಣದ ಕನ್ಯಾಕುಮಾರಿಯ ತ್ರಿವಳಿಸಂಗಮದ ಸಾಗರನಷ್ಟು ವಿಸ್ತಾರ. ಮಾನವರು ಗುರು, ಗುರಿ ಮುಟ್ಟುವ ಸಂದೇಶ ಶ್ರೀಸ್ವಾಮಿವಿವೇಕಾನಂದರದು, ಅದರಂತೆ ಜಗತ್ತಿನ ಸರ್ವಮಾನವರು ಒಂದೇ ಎಂಬ ಸಂದೇಶ ಶ್ರೀಅಣ್ಣಬಸವಣ್ಣನವರದು ಸಾಮಾನ್ಯರು ಅಸಮಾನ್ಯ ಎಂಬ ಭಾವ ಅವರದು.

"ಮಹಾತ್ಮರ ಚರಿತಾಮೃತ" ಎಂಬ ಈ ಮಹತ್ಕೃತಿಯಲ್ಲಿ ಮಹಾತ್ಮರ ಚರಿತ್ರೆಗಳನ್ನು ಅಕಾರಾದಿಯಾಗಿ ಹೊಂದಿಸಲಾಗಿದೆ. ಉಳಿದಂತೆ ಕೃತಿಯಲ್ಲಿ ಆದಿಕವಿ ವಾಲ್ಮೀಕಿಯಿಂದ ಆಧುನಿಕ ವಿಶ್ವಪ್ರಸಿದ್ಧ ಕವಿ ರವೀಂದ್ರನಾಥರವರೆಗೆ ಅನೇಕ ಕವಿಗಳು ಮಹಾವೀರ, ಬುದ್ಧ ಬಸವನಂತಹ ದಾರ್ಶನಿಕರು, ಶಂಕರ, ರಾಮಾನುಜ, ಮಾಧ್ವಾರಂತಹ ಆಚಾರ್ಯರು. ಏಸು, ಮಹಮ್ಮದ ಗುರುನಾನಕರಂಥ ಧರ್ಮಪ್ರವರ್ತಕರು, ಜ್ಞಾನೇಶ್ವರ, ತುಕರಾಮ, ಸೇವಾಲಾಲ, ರಾಮದಾಸರಂಥ ಸಂತರು ಕನಕ, ಪುರಂದರದಾಸರು, ಅಕ್ಕ, ಅಲ್ಲಮ, ಸಿದ್ಧರಾಮನಂಥ ಯೋಗಸಾಧಕರು, ರಬಿಯಾ ಅಂಡಾಳ, ಮೀರಾ, ಲಲ್ಲೇಶ್ವರಿಯಿಂದ ಮೊದಲ್ಗೊಂಡು ಆಧುನಿಕ ಕಾಲದ ಸಜ್ಜಲಗುಡ್ಡದ ಶರಣಮ್ಮ, ಸೊನ್ನಲಪುರದ ರುದ್ರಮ್ಮ, ಜಯದೇವಿತಾಯಿಯವರಂಥ ಮಹಿಳಾ ಸಾಧಕಿಯರು, ನಿಜಗುಣಶಿವಯೋಗಿ, ಸರ್ಪಭೂಷಣ, ನಾಗಭೂಷಣ, ಬಾಲಲೀಲಾಮಹಂತಾಶಿವಯೋಗಿ, ಶಿಶುನಾಳಶ–ರೀಪರಂಥ ತತ್ವಪದಕಾರರು, ಖ್ವಾಜಾಬಂದೇನವಾಜರಂತಹ ಮಹಮ್ಮದೀಯ

ಮೌಲ್ವಿಗಳು, ಎಡೆಯೂರು ಸಿದ್ದಲಿಂಗೇಶ್ವರ, ಅಥಣಿಯ ಮುರುಗಯೋಗಿ, ಹಾನಗಲ್ಲಕುಮಾರಸ್ವಾಮಿಯಾಗಿ ಇತ್ತೀಚಿನ ತೋಂಟದಸಿದ್ಧಲಿಂಗಸ್ವಾಮಿಗಳವರೆಗೆ ಅನೇಕ ಸ್ವಾಮಿಗಳು, ಅರವಿಂದ ರಮಣರಂಥ ಮಹರ್ಷಿಗಳು, ರಾಮಕೃಷ್ಣ– ವಿವೇಕಾನಂದರಂಥ ಗುರು ಶಿಷ್ಯರು; ರಾಜರಾಮಮೋಹನರಾಯ, ದಯಾನಂದಸರಸ್ವತಿ, ಜ್ಯೋತಿಬಾಫುಲೆ, ನಾರಾಯಣ ಗುರುಗಳಂಥ ಸಮಾಜ ಸುಧಾರಕರು, ಮಹಾತ್ಮಗಾಂಧಿ– ಅಂಬೇಡ್ಕರ್ ಅಂಥ ದೇಶಭಕ್ತರ ಚರಿತ್ರೆಗಳಿವೆ. ತತ್ವಜ್ಞಾನಿರಾನಡೆ ಇಸ್ಕಾನ್ ಪ್ರಭುಪ್ರಸಾದರು, ಈಶ್ವರಿ ವಿವಿಯ ಬ್ರಹ್ಮಬಾಬಾ, ಸಾಹಿಬಾಬಾ ಅವರ ಚರಿತ್ರಗಳು ಇಲ್ಲಿವೆ." (ಪೂಜ್ಯಶ್ರೀಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಶುಭನುಡಿ ಲೇಖನ, ಮಹಾತ್ಮರ ಚರಿತಾಮೃತ ಕೃತಿ, ಪು. 9) ವಿದ್ಯೆ, ಯೋಗ, ಸಮಾಜಸೇವೆ ಸಾಧಕರ ಸ್ವತ್ತು. ಸಾಮಾನ್ಯರಾಗಿ ಹುಟ್ಟಿ ಅಸಮಾನ್ಯರಾಗಿ ಮೆರೆದ ಬಹುಎತ್ತರದ ಮಹಾನುಭಾವರ ಚರಿತ್ರೆಯಾಗಿ ಈ ಮಹಾನ್ ಕೃತಿ ಪಡಿಮೂಡಿಸಿದೆ. ಬಸವಣ್ಣನವರ ತತ್ವದಲ್ಲಿ ಅಪಾರ ಭಕ್ತಿ, ಗೌರವ, ಸಮಾಜಸೇವೆ, ಅನುಕರಿಸಿದ ಶ್ರೀ ಶ್ರೀ ಸಿದ್ಧಗಂಗೆ ಶ್ರೀಶಿವಕುಮಾರಸ್ವಾಮಿ, ಸುತ್ತೂರುಶ್ರೀರಾಜೇಂದ್ರ ಶ್ರೀಗಳು, ಶ್ರೀಮುರುಗಾಮಠ ಚಿತ್ರದುರ್ಗಾ, ಆದಿಚುಂಚನಗಿ–ರಿಮಠ, ಉಡುಪಿಮಠಗಳ ಮಹೋನ್ನತಿಯ ಸಾಧನೆ, ಶಿಕ್ಷಣದ ಆಶಯಗಳು ಉತ್ತಮ ರೀತಿಯಲ್ಲಿ ಅನುಸಂಧಾನಗೊಂಡಿವೆ. ಮಲ್ಲಾಡಿಹಳ್ಳಿ ತಿರುಕರ ಭಾಷ್ಯವೂ ಇದೆ. ಅದೊಂದು ಯೋಗಾಯೋಗದ ಕರ್ಮದ ಭೂನೆಲ, ಅಂತೆಯೇ ರಾಷ್ಟ್ರಕವಿಕವೆಂಪು, ರವೀಂದ್ರನಾಥಠಾಗೂರ್, ದ.ರಾ. ಬೇಂದ್ರೆ, ಹರ್ಡೇಕರ್‌ಮಂಜಪ್ಪ ಕರ್ನಾಟಕದ ಗಾಂಧಿ, ಕನ್ನಡದ ಕುಲಪುರೋಹಿತ, ಕರ್ನಾಟಕದ ಏಕೀಕರಣ ಶಿಲ್ಪಿ ಸರ್‌ಸಿದ್ದಪ್ಪಕಂಬಳಿ, ಶ್ರೀನಿಜಲಿಂಗಪ್ಪ, ಅವರ ವ್ಯಕ್ತಿತ್ವ ಪೂರ್ಣತೆಯ ವಿವರಗಳು ಈ ಕೃತಿಯ ಮೇಲುಭಾವಣಿಗೆ ಉತ್ತಮ ನಿದರ್ಶನವಾಗಿವೆ. ಎಲ್ಲರೂ ಅಸಾಧಾರಣ ಸಾಧಕರೆ ಎಲ್ಲರೂ ಸಾಮಾನ್ಯ ತತ್ವದಿಂದ ಮಹತ್ವದ, ಮಹಾಚರಿತಾಮೃತ ಕೃತಿಯಲ್ಲಿ ಬಿತ್ತವಾಗಿ ಬಿತ್ತಿ, ಮಹಾಬೆಳೆಸಾಗಿ ಫಲನೀಡಿವೆ. ಈ ಕೃತಿ ಮಹಾಜ್ಞಾನಿಗಳು, ಮಹಾಸಂತರು, ಮಹಾನ್‌ಲೇಖಕರ ಜೀವನ ಸಂಕಥನ ವಿಭೂತಿಪುರುಷರ ಮಹಾಬೆಳಗು. ಮಲೆಯಮಾದೇಶ್ವರ, ಮಂಟೇಸ್ವಾಮಿಗಳ ಪವಾಡಗಳ ಚರಿತವಿದೆ. ಸ್ಥಳಮಹಿಳೆಯ ವಿಸ್ತಾರ ಚರಿತ್ರೆ ಎಳೆಎಳೆಯಾಗಿ ಓದುಗರಿಗೆ ಲಭ್ಯವಾಗಿದೆ. ಪೂಜ್ಯ ಅಥಣಿ ಚೆನ್ನಬಸವ ಸ್ವಾಮಿಜಿಯವರ ತಪಸ್ಸಿನಫಲ ಈ ಮಹಾತ್ಮರ ಚರಿತಾಮೃತ ಕೃತಿ. ಈ ಲೇಖಕರ ತಾಳ್ಮೆ, ಸಹನೆ, ಸತತಾಭ್ಯಾಸದ ಅಧ್ಯಯನ, ಉತ್ಸಾಹ, ಅವರ ಆಂತರಿಕ ಪ್ರತಿಭಾ ಚುಕ್ಷುವಿನಿಂದ ಇಂಥದೊಂದು ಮೇರು ಕೃತಿ ಮೂರನೇ ಬೆರಗಿನ ಮುದ್ರಣವಾಗಿ 2022ರಲ್ಲಿ ಸಾರಸ್ವತಲೋಕಕ್ಕೆ ಸಂದಿದೆ, ಸೇರ್ಪಡೆಯಾಗಿದೆ. ಸು.

ಮೂರುನೂರು ಪರಾಮರ್ಶನ ಗ್ರಂಥದನೆಯ್ಗೆ ಈ ದೊಡ್ಡ ಹೊತ್ತಿಗೆ. ಕೃತಿಕಾರರೇ ಹೇಳುವಂತೆ "ನಾಥರು, ಸಿದ್ಧರು, ಶಿವಯೋಗಿಗಳು, ಶರಣರು, ಶರಣೆಯರು, ಅನುಭಾವಿಗಳು, ಆರೂಢರು, ದಾರ್ಶನಿಕರು, ಅವಧೂತರು, ಮಹರ್ಷಿಗಳು, ಸೂಫಿಸಂತರು, ಮಹಾಸ್ವಾಮಿಗಳು, ಆದಿಗುರುಗಳು, ಸದ್ಗುರುಗಳು, ರಾಜಗುರುಗಳು, ಜಗದ್ಗುರುಗಳು, ಭಾವೈಕ್ಯಬಂಧು, ಗಾನಯೋಗಿ, ದಾಸರು, ತತ್ವಪದಕಾರರು ಎಂದೆಲ್ಲ ಕರೆಯುತ್ತೇವೆ. ಇಂತಹ ನೂರೊಂದು ನವವಿಧಾತರ ಚರಿತೆಯೇ ಈ ಮಹಾತ್ಮರ ಚರಿತಾಮೃತ' ಇವರೆಲ್ಲರೂ ಈ ಕೃತಿಯ ಕರುಳಾಗಿದ್ದಾರೆ. ಈ ಶಬ್ದಗಳಿಗೆ ನಿಶಬ್ದ ನಿಲುವಾಗಿ ನಿಂತಿದ್ದಾರೆ." (ಪ್ರಭು ಚೆನ್ನಬಸವಸ್ವಾಮಿಜಿ, ಮಹಾತ್ಮರ ಚರಿತಾಮೃತ, ಪು.50). ಈ ಕೃತಿಯಲ್ಲಿ ಗಾನಯೋಗಿ ಪಂಚಾಕ್ಷರಿ ಗವಾಯಿಗಳು. ಶ್ರೀ. ಪುಟ್ಟರಾಜ ಗವಾಯಿಗಳು ಗಾನಸುಧಾಲಹರಿಯು ಹರದಿದೆ. ಜಗತ್ತಿಗೆ ಅವರ ಅಗಾಧವಾದ ಸಾಧನೆಯ ವಿವರಗಳನ್ನು ಬಿತ್ತರಿಸಿದೆ. ಲಕ್ಷಾಂತರಅಂಧರ ಬಾಳಿಗೆ ಬೆಳಕಾದ ಗದುಗಿನನೆಲದ ಮಹಿಮೆ ಈ ಕೃತಿಯಲ್ಲಿ ಅನಾವರಣಗೊಂಡಿದೆ. ಭಾರತದ ಗಂಗಾ, ಕಾವೇರಿ ನದಿಗಳು. ತುಂಗೆ, ಕೃಷ್ಣೆ, ಘಟಪ್ರಭಾ, ಮಲಪ್ರಭಾ ನದಿಗಳು ತಮ್ಮ ತಮ್ಮ ತೆಕ್ಕೆಯಲ್ಲಿ ಅನೇಕ ಮಹಾ ಚೇತನಗಳಿಗೆ ಜನ್ಮವಿತ್ತಿವೆ. ಆ ಜೇತನಗಳೇ ನದಿಯಾಗಿ ಹರಿದು, ಕಡಲ ಸೇರಿ, ಜಗಕೆ ವಿಸ್ತರಿಸಿವೆ.

ಈ ಕೃತಿಯ ಶಿಲ್ಪಿಗಳೇ ಹೇಳುವಂತೆ "ಸಚ್ಚಿದಾನಂದ ಸ್ವರೂಪಿಗಳಾದ ಮಹಾತ್ಮರು ನಮ್ಮಂತೆಯೇ ಶರೀರತೊಟ್ಟು ಬರೀಮಾನವರಲ್ಲ; ಮಾಧವರು; ಮುಕ್ತಾತ್ಮರು, ಬ್ರಹ್ಮಚೇತನರು, ಲೌಕಿಕವಾಗಿ ತಂದೆತಾಯಿ ಊರುಕೇರಿಗಳ ಸಂಬಂಧ ಬೆಳೆದು ಬಂದಿವೆಯೇ ಹೊರತು ಅವರೆಲ್ಲ ವಿಮಲ ಪರಂಜ್ಯೋತಿಗಳು. ಅಂಥವರ ಚರಿತೆ ಬರೆಯುವುದೆಂದರೆ ಅದು ಸಾಮಾನ್ಯರ ಕಥೆಯಲ್ಲ. ಇದು ಅಸಮಾನ್ಯರ ಜೀವನಗಾಥೆ" (ಅದೇ ಪು. 50).

ಅಲ್ಲಮರು 'ಶಬ್ದದೊಳಗಣ ನಿಶ್ಯಬ್ದದಂತೆ' ಎಂದು ಸರ್ವಾರ್ಥದ, ವಿಸ್ತಾರವನ್ನು, ಬಯಲಲಿ ಬೆಳಗಾದ ದನಿಯನ್ನು ಹೇಳಿದ್ದಾರೆ. ಕಬ್ಬಿನೊಳಗಿನ ರಸ, ಹೂವಿನೊಳಗಿನ ಪರಿಮಳ ದುಂಬಿಉಣುವಂತೆ, ಈ ಪೂಜ್ಯ ಅಥಣೇಶರು ಸೃಜಿದಿದ್ದು, ಒಂದು ನವನವೀನ ಪಥ್ಯಗಳು ಈ ಕೃತಿಯಿಂದ ಓದುಗರಿಗೆ ಒಂದೇ ಸ್ಥಳದಲ್ಲಿ ದೊರೆಯುತ್ತಿವೆ. ಡಾ. ಶ್ರೀಸಿದ್ದಯ್ಯಪುರಾಣಿಕರು ಶರಣಚರಿತಾಮೃತ, ಡಾ. ಎಚ್.ಟಿ. ತಿಪ್ಪೇರುದ್ರಸ್ವಾಮಿ ಅವರ ಕರ್ನಾಟಕಶರಣರಚರಿತಾಮೃತ ಕೃತಿಗಳು ಅನೇಕ ಸಿದ್ಧ ಪುರುಷರು, ಸಂತರು, ಜಗದ್ಗುರುಗಳಿಗೆ ಮಹಾದೀವಿಗೆಯಾಗಿ, ವಚನಗಳು ದಾರಿದೀಪವಾದ ಮಾಹಿತಿಗಳು ಲಭ್ಯವಾಗಿವೆ. ದಾಸರ ಕೀರ್ತನೆಗಳು, ದಾಸ ವರ್ಯರು ಸ್ಥಾನಪಡೆದಿದ್ದಾರೆ. ಈ ಕೃತಿಕಾರರು ಹೇಳುವಂತೆ" ಕನ್ನಡದಿಂದ

ಕೊಲ್ಕತ್ತಾ, ಉತ್ತರದಿಂದ ದಕ್ಷಿಣದವರೆಗೆ ಸು. ಒಂಬತ್ತು ರಾಜ್ಯ ಹಾಗೂ ವಿದೇಶ ಪ್ರವಾದಿಗಳ ಜೀವನ ಚರಿತೆಯನ್ನು ಬರೆದಿದ್ದೇನೆ. ಪ್ರವಾದಿಗಳಿಂದ ಪೂಜ್ಯರವರೆಗೆ, ಆಚಾರ್ಯರಿಂದ ಅನುಭಾವಿಗಳವರೆಗೆ, ಶರಣರಿಂದ ಶಿವಯೋಗಿಗಳವರೆಗೆ, ಅವಧೂತರಿಂದ ಅರೂಢರವರೆಗೆ, ಮಹರ್ಷಿಗಳಿಂದ ಮಹಾತ್ಮರವರೆಗೆ ಎಲ್ಲರ ಚರಿತೆಗಳು ವಿಭಿನ್ನ, ವಿಶಿಷ್ಟ ವಿನೂತನವಾಗಿವೆ. ಕೆಲವು ಕ್ರಾಂತಿಯ ಕಿಡಿಗಳಾಗಿದ್ದರೆ, ಹಲವು ಶಾಂತಿಯ ಸರೋವರದಂತಿವೆ. ಕೆಲವು ಮಂದಾರದ ಮರುಗದಂತಿದ್ದರೆ, ಹಲವು ಅನಿಕೇತನ ಚೇತನದಂತಿವೆ. ಅಂಥ ಮೌಲಿಕ ಮುಕ್ತಕಗಳು, ಅವುಗಳನ್ನು ಬಣಿಸಲು ಶಬ್ದಗಳು ಸೋಲುತ್ತವೆ. ಅವರಿಗವರೇ ಸಾಟಿ, ಅವರಿಗವರೇ ಮಹದ ಮೇಟಿ" (ಅದೇ ಪು. 52–53).

ಈ ಅಕ್ಷರಕೃಷಿಯ ಕನ್ನಡಸಾಧಕರ ಸಾಲಿನಲ್ಲಿ ಶ್ರೀ ಅಥಣೀಶರು ಸೇರ್ಪಡೆಯಾಗಿದ್ದಾರೆ. ಅವರು ಸಾಹಿತ್ಯದ ಮೇಟಿ. ಅಕ್ಷರ ತೇಜದ ಮೂಲಕ ಅನೇಕ ಮಹಾನೀಯರ ಸಿದ್ಧಿ, ಸಾಧನೆಗಳನ್ನು ತೇಜೋಪುಂಜವಾಗಿ ಬೆಳೆಗಿದ್ದಾರೆ. ಭಾರತದ ಮೇರು ಪುರುಷರ ಸಾಧನೆ ನಮ್ಮ ಮುಂದೆ ಹಾದುಹೋಗುವಂತೆ, ಈ ಮೇರು ಕೃತಿ ಸೃಜಿಸಿದ್ದಾರೆ. ಸು. 1088 ಪುಟಗಳಲಿ ಶರಣಬಂಧುಗಳ ವಿಚಾರ ಚರ್ವಿತ ಚರ್ವಣವಾಗಿ ಅಭಿವ್ಯಕ್ತಿಗೊಂಡಿದೆ.

'ಪ್ರಜ್ಞೆಯ ನವನವೋನ್ಮೇಶ ಶಾಲಿನಿ' ತೇಜಸ್ಸು ಚಲಿಸುವ ಆಕಾಶದ ಪರಿಧಿಯಂತೆ, ಭಾನು, ಬಾನೆತ್ತೆರದ ಅರಿವಿನ ಜ್ಞಾನ ಈ ಕೃತಿಯಲ್ಲಿ ಅರಳಿನಿಂತಿವೆ. ಇದೊಂದು ಜ್ಞಾನಸಾಗರ. ವಿಸ್ತಾರಕಡಲಿನೊಳಗಿರುವ ಮುತ್ತುರತ್ನ ಅನೇಕ ಸಂಶೋಧಕ, ಸಹೃದಯರಿಗೆ ಆಕರಗ್ರಂಥ. ಕನ್ನಡದ ಅನೇಕ ಶಿವಶರಣರ ಸಾಧುಸಂತರ ಸಾಧನೆಯ ಶಿಖರ ಈ ಮೇರುಕೃತಿ.

**ಪರಾಮರ್ಶನ ಗ್ರಂಥಗಳು:**

1. ಪ್ರಭುಚೆನ್ನಬಸವಸ್ವಾಮಿಜಿ, ಮಹಾತ್ಮರ ಚರಿತಾಮೃತ (ಮೂರನೇ ಮುದ್ರಣ, 2022), ಶ್ರೀಮೊಟಗಿ ಮಠ, ಅಥಣಿ.
2. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ಪ್ರಧಾನ ಮತ್ತು ಅಧೀನ ಸಂಸ್ಕೃತಿ (1993), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ತಿರುಮಲೇಶ ಕೆ. ವಿ., ಕಾವ್ಯಕಾರಣ (2007), ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ತಿಪ್ಪೆರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿಸಮೀಕ್ಷೆ (ಹದಿನೈದನೇ ಮುದ್ರಣ, 2018), ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.